ಕರ್ನಾಟಕ ರಾಜ್ಯಪತ್ರ
ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಶನಿವಾರ, ೧೭, ಜನವರಿ, ೨೦೨೬(ಪುಷ್ಯ, ೨೭, ಶಕವರ್ಷ, ೧೯೪೭)<br>BENGALURU, SATURDAY, 17, JANUARY, 2026(PUSHYA , 27, SHAKAVARSHA, 1947) | ನಂ. ೬೭<br>No.67 |
|---|---|---|

**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**

ಸಂಖ್ಯೆ: ಕಪಂರಾಸೀನಿಆ/85/ಪ್ರಾ.ಗ.ನಿ/2023 ದಿನಾಂಕ:17-01-2026

# ಪ್ರಕಟಣೆ

**ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.**

ನಗರಾಭಿವೃದ್ಧಿ ಇಲಾಖೆಯು, ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸಂಸ್ಥೆಗಳನ್ನಾಗಿ ಪರಿವರ್ತಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ, ಈಗಾಗಲೇ ದಿನಾಂಕ:16-12-2023ರಲ್ಲಿ ಅಧಿಸೂಚಿಸಿ ಹೊರಡಿಸಿರುವ ಶಹಾಪುರ ತಾಲ್ಲೂಕಿನ, ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಪರಿವರ್ತನೆಗೊಂಡಿರುವ ಗ್ರಾಮೀಣ ಪ್ರದೇಶಗಳನ್ನು ಕೈಬಿಡಬೇಕಾಗಿರುತ್ತದೆ. ಆದ್ದರಿಂದ, ಸರ್ಕಾರವು, ದಿನಾಂಕ:06-01-2026ರ ಕರ್ನಾಟಕ ರಾಜ್ಯ ಪತ್ರದಲ್ಲಿ ಶಹಾಪುರ ತಾಲ್ಲೂಕಿನ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಶಹಾಪುರ ತಾಲ್ಲೂಕಿನ ಪರಿಷ್ಕೃತ ಸದಸ್ಯರ ಸಂಖ್ಯೆಯನ್ನು ಹಾಗೂ ಸೀಮಾ/ಗಡಿಗಳನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 121, 122 ಮತ್ತು 124 ರನ್ವಯ ಹಾಗೂ 308(ಎಫ್) ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ. **'ಅ'** ಕೋಷ್ಟಕದ 2ನೇ ಅಂಕಣದಲ್ಲಿರುವ ತಾಲ್ಲೂಕಿನಿಂದ ಆಯ್ಕೆಯಾಗುವ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು 3ನೇ ಅಂಕಣದಲ್ಲಿ ನಿಗದಿಪಡಿಸಿದೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು **18** ಏಕ ಸದಸ್ಯ ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಟಕ **'ಆ'** ದಲ್ಲಿರುವಂತೆ ನಿರ್ಣಯಿಸಿದೆ. **'ಆ'** ಕೋಷ್ಟಕದ 2 ನೇ ಅಂಕಣದಲ್ಲಿ ಪ್ರತಿಯೊಂದು ತಾಲ್ಲೂಕು

ಪಂಚಾಯತಿಯ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಟಕದ 3 ನೇ ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ 7 (ಏಳು) ದಿವಸಗಳ ಒಳಗಾಗಿ **ಅಂದರೆ ದಿನಾಂಕ:23-01-2026 ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್‌ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001

**ಕೋಷ್ಟಕ 'ಅ'**

| **ಯಾದಗಿರಿ ಜಿಲ್ಲೆ** | | |
|---|---|---|
| **ಕ್ರ. ಸಂ.** | **ತಾಲ್ಲೂಕು ಪಂಚಾಯತಿಯ ಹೆಸರು** | **ತಾಲ್ಲೂಕು ಪಂಚಾಯತಿಯ ಸದಸ್ಯರ ಸಂಖ್ಯೆ** |
| **1** | **2** | **3** |
| | **ಶಹಾಪುರ** | 18 |

**ಕೋಷ್ಟಕ 'ಆ'**

| **ಯಾದಗಿರಿ ಜಿಲ್ಲೆ** | | |
|---|---|---|
| **ಕ್ರ ಸಂ** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು** |
| **1** | **2** | **3** |
| **ಶಹಾಪುರ ತಾಲ್ಲೂಕು ಪಂಚಾಯಿತಿ** | | |
| **1** | 01-ಮುಡಬೂಳ | ಮುಡಬೂಳ, ಅರಳಹಳ್ಳಿ, ಸಲಾದಪೂರ, ಬಿಲ್ವಾಡ(ಡಿ). |
| **2** | 02-ಮದ್ದರಕಿ | ಮದ್ದರಕಿ, ಕೊಡಮನಹಳ್ಳಿ, ಸಾದ್ಯಾಪೂರ, ಸಿಂಗನಳ್ಳಿ, ಇಂಗನಾಳ(ಡಿ). |
| **3** | 03-ಶಿರವಾಳ | ಶಿರವಾಳ, ಅಣಬಿ, ರೋಜಾ ಎಸ್ ಶಿರವಾಳ, ಇಟಗಾ ಎಸ್.ಶಿರವಾಳ, ಹಂದ್ರಾಳ(ಡಿ), ಹುರಸಗುಂಡಗಿ, ಬಿದರಾಣಿ, ಹಬ್ಬಳ್ಳಿ. |
| **4** | 4-ಹೋತಪೇಠ | ಹೋತಪೇಠ, ಹಾಲಬಾವಿ, ಮಕ್ತಾಪೂರ, ದಿಗ್ಗಿ, ಇಂಗಳಗಿ, ಮಡ್ನಾಳ, ರಾಜಾಪೂರ(ಕೆ)(ಡಿ). |
| **5** | 5-ಚಟ್ನಳ್ಳಿ | ಚಟ್ನಳ್ಳಿ, ನಾಲ್ವಡಗಿ, ಕರಣಗಿ, ಬಲಕಲ್, ಮರಮಕಲ್, ಇಬ್ರಾಹಿಂಪೂರ, ತಂಗಡಗಿ. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಯಾದಗಿರಿ ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| 6 | 6-ಗೋಗಿಪೇಠ | ಗೋಗಿಪೇಠ, ನೆಗ್ಗಿನಾಳ(ಡಿ). |
| 7 | 7-ಗೋಗಿ(ಕೆ) | ಗೋಗಿ(ಕೆ). |
| 8 | 8-ಉಕ್ಕಿನಾಳ | ಉಕ್ಕಿನಾಳ, ಹಾರಣಗೇರಾ, ರಬ್ಬನಹಳ್ಳಿ, ಕರಕಿಹಳ್ಳಿ. |
| 9 | 9-ಚಾಮನಾಳ | ಚಾಮನಾಳ, ಚಂದಾಪೂರ, ದರ್ಶನಾಪೂರ, ಗುಂಡಾಪೂರ, ನಡಿಹಾಳ. |
| 10 | 10-ಖಾನಾಪೂರ | ಖಾನಾಪೂರ, ಗುಂಡಹಳ್ಳಿ, ಮನಗನಾಳ. |
| 11 | 11-ಕಕ್ಕಸಗೇರಾ | ಕಕ್ಕಸಗೇರಾ, ಬೂದನೂರ, ಬೋವಿಕಾಡಮಗೇರಾ, ಆಲ್ದಾಳ. |
| 12 | 12-ಹೊಸಕೇರಾ | ಹೊಸಕೇರಾ, ಶೆಟ್ಟಿಕೇರಾ, ರಾಜಾಪೂರ(ಬಿ), ಮಹಲರೋಜಾ. |
| 13 | 13-ನಾಗನಟಗಿ | ನಾಗನಟಗಿ, ಬಾಣತಿಹಾಳ, ಸೈದಾಪೂರ, ಉಮರದೊಡ್ಡಿ, ಗಂಗನಾಳ, ದರಿಯಾಪೂರ. |
| 14 | 14-ಕನ್ನಾಕೊಳ್ಳುರ | ಕನ್ಯಾಕೋಳುರ, ತಿಪ್ಪನಹಳ್ಳಿ, ಬೇನಕನಹಳ್ಳಿ(ಜೆ), ನಂದಿಹಳ್ಳಿ(ಕೆ)(ಡಿ), ಹತ್ತಿಗೂಡುರ, ಕೊಂಗಂಡಿ ಎಸ್.ಆರ್, ಮಂಡಗಳ್ಳಿ, ಹಳಿಸಗರ(ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿ ಹೊರತುಪಡಿಸಿ). |
| 15 | 15-ವನದುರ್ಗ | ವನದುರ್ಗಾ, ಚೆನ್ನೂರ(ಕೆ). |
| 16 | 16-ಸಗರ | ಸಗರ. |
| 17 | 17-ರಸ್ತಾಪೂರ | ರಸ್ತಾಪೂರ, ವಿಭೂತಿಹಳ್ಳಿ, ಶಾರದಹಳ್ಳಿ. |
| 18 | 18-ಕೊಳ್ಳೂರ | ಕೊಳ್ಳೂರ, ಟೊಣ್ಣೂರ, ಗೌಡುರ, ಮರಕಲ್, ಚಂದ್ರಾಳ(ಡಿ), ಬೀರನೂರ, ಕಾಟಮನಹಳ್ಳಿ, ಸಾವೂರ, ನಂದಿಹಳ್ಳಿ(ಜೆ), ಪರಸಾಪೂರ. |

**ವಿಶೇಷ ಸೂಚನೆ:-**

**ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:23-01-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:27-01-2026 ರಂದು ಬೆಳಿಗ್ಗೆ10:30 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:229, 230 ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.**

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH